**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5050/2024 ಫ್ರಾಸಾ-9
ಚಾಸಾ-10

ದಿನಾಂಕಃ 15-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಗೋಪಿ |
| **ತಂದೆಯ / ಗಂಡನ ಹೆಸರು** | ಆಂಜಿನಪ್ಪ |
| **ವಯಸ್ಸು** | 43 |
| **ಉದ್ಯೋಗ** | ಗಾರೆ |
| **ವಾಸಸ್ಥಳ** | ಕೆ. ರಾಂಪುರ, ಪಾವಗಡ ತಾಲ್ಲೂಕು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಆರೋಪಿಯ ಪರಿಚಯ ಇರುತ್ತದೆ. ಆತನ ಹೆಂಡತಿ ಹೆಸರು ಆದಿಲಕ್ಷ್ಮಮ್ಮ. ಆದಿಲಕ್ಷ್ಮಮ್ಮ 11 ತಿಂಗಳ ಹಿಂದೆ ತೀರಿಕೊಂಡಿರುತ್ತಾರೆ. ಆದಿಲಕ್ಷ್ಮಮ್ಮನಿಗೆ ಏನು ಆಗಿ ತೀರಿಕೊಂಡಿರುತ್ತಾಳೆಂದು ಎಂದು ನನಗೆ ಗೊತ್ತಿಲ್ಲ. ಆದಿಲಕ್ಷ್ಮಮ್ಮನ ಹೇಗೆ ತೀರಿಕೊಂಡಿರುತ್ತಾರೆ , ಏಕೆ ತೀರಿಕೊಂಡಿರುತ್ತಾಳೆ ಅವಳ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಆರೋಪಿ ರಮೇಶ ಹೆಂಡತಿ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುತ್ತಾನೆ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 12.08.2024 ರಂದು ಮಧ್ಯಾಹ್ನ 12-10 ಗಂಟೆಗೆ ನಾನು ನಮ್ಮ ಊರಿನ ಶಾಲೆಯ ಬಳಿ ನಿಂತಿದ್ದಾಗ ಚಾಸಾ-2 ಜೋರಾಗಿ ಕಿರುಚಿದ್ದನ್ನು ಕೇಳಿ ನಾನು ಮನೆ ಹತ್ತಿರ ಹೋಗಿ ನೋಡಲಾಗಿ ಆದಿಲಕ್ಷ್ಮಮ್ಮ ನೆಲದ ಮೇಲೆ ಅವರ ಮನೆಯಲ್ಲಿ ರಕ್ತದ ಮಡುವಿನಲ್ಲಿ

ಹೊರಳಾಡುತ್ತಿದ್ದಳು, ತಲೆಯಿಂದ ರಕ್ತ ಸುರಿಯುತ್ತಿತ್ತು, ಆಗ ನಾನು ಗಂಗಮ್ಮಳಿಗೆ ಕೇಳಿದಾಗ ಅವಳು ಆರೋಪಿ ಮದ್ಯ ಕುಡಿಯಲು ಹಣ ಕೊಡದೇ ಇದ್ದಾಗ ಆದಿಲಕ್ಷ್ಮಮ್ಮನಿಗೆ ಟಿವಿ ನೋಡಿಕೊಂಡು ಬಟ್ಟೆ ಮಡುಚುತ್ತಿದ್ದಾಗ ಚಿಕ್ಕ ಒಣಕೆಯಿಂದ ತಲೆಗೆ ಹೊಡೆದು ರಕ್ತಗಾಯ ಮಾಡಿರುತ್ತಾನೆ ಎಂದು ಹೇಳಿದಳು ಎಂದರೆ ಸರಿಯಲ್ಲ.

ನಾನು ಆಂಬುಲೆಯನ್ಸ್ ಗೆ ಫೋನ್ , ಆಂಬುಲೆಯನ್ಸ್ ಕರೆಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 3 ಪಾವಗಡ ಆಸ್ಪತ್ರೆಗೆ ಕರೆದುಕೊಂಡು ಹೋದರು , ನಂತರ ನಿಮಾನ್ಸ್ ಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಆದಿಲಕ್ಷಮ್ಮ ತೀರಿಕೊಂಡಳು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಈ ಓದಿ ಹೇಳಿದ ಹೇಳಿಕೆ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು. ಆದಿಲಕ್ಷ್ಮಮ್ಮಳ ಸಾವಿಗೆ ಆರೋಪಿಯೇ ಕಾರಣ ಎಂದು ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ. ಬಿ.ಬಿ.ಎಂ. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**